International Journal of Kannada Research 2017; 3(4): 91-93




International Journal of Kannada Research
www.kannadajournal.com

**ISSN: 2454–5813**
IJKR 2017; 3(4): 91-93
© 2017 IJKR
www.kannadajournal.com
Received: 17-08-2017
Accepted: 18-09-2017

**ಜಗದೀಶ ಮುಗಳಿ**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

**Correspondence**
**ಜಗದೀಶ ಮುಗಳಿ**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ

# ವ್ಯಕ್ತಿತ್ವ ನಿರ್ಮಾಣದ ನೆಲೆಗಳು: ಪುರಂದರದಾಸರು ಮತ್ತು ಕನಕದಾಸರು

**ಜಗದೀಶ ಮುಗಳಿ**

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳೆರಡೂ ಪ್ರಮುಖ ಘಟ್ಟಗಳು. ಜನಸಾಮಾನ್ಯರನು ತಲುಪಿದ ಸಾಹಿತ್ಯ ಪ್ರಕಾರಗಳಿವು. ಹರಿದಾಸರು ದಾಸ ಸಾಹಿತ್ಯದ ಮೂಲಕ ಹೊಸ ಸಾಹಿತ್ಯ ಪ್ರಕಾರಗಳನ್ನು ಹುಟ್ಟುಹಾಕಿದರು. ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ತುಂಬಿದರು. ಕನಕದಾಸರು ಮತ್ತು ಪುರಂದರದಾಸರು ತಮ್ಮ ಸಾಮಾಜಿಕ ಚಿಂತನೆ, ಕಾವ್ಯ ಮತ್ತು ಕೀರ್ತನೆಗಳ ಮೂಲಕ ಸಾಹಿತ್ಯ ಮತ್ತು ಸಂಗೀತಕ್ಕೆ ಮಹತ್ತರ ಕಾಣಿಕೆ ಸಲ್ಲಿಸಿದ್ದಾರೆ. ಪುರಂದರದಾಸರನ್ನು 'ಕರ್ನಾಟಕ ಸಂಗೀತದ ಪಿತಾಮಹ' ಎಂದು ಕರೆಯಲಾಗಿದೆ. ಕನಕದಾಸರನ್ನು 'ಹೊಸಗನ್ನಡ ಸಾಹಿತ್ಯದ ಕೋಗಿಲೆ' ಎಂದು, 'ದಾಸ ಸಾಹಿತ್ಯ ಬನದ ಕೋಗಿಲೆ' ಎಂದು ವಿದ್ವಾಂಸರು ಕರೆದಿದ್ದಾರೆ. ೧೬ನೆಯ ಶತಮಾನದಲ್ಲಿ ಬಾಳಿ ಬೆಳಗಿದ ಇವರಿರ್ವರ ಕಾಲವನ್ನು 'ದಾಸ ಸಾಹಿತ್ಯದ ಸುವರ್ಣಯುಗ' ಎಂದು ಕರೆಯಲಾಗಿದೆ.

ಪುರಂದರದಾಸರು ಮತ್ತು ಕನಕದಾಸರನ್ನು 'ದಾಸಸಾಹಿತ್ಯದ ಅಶ್ವಿನಿದೇವತೆಗಳು' ಎಂದು ಕರೆಯಲಾಗಿದೆ. ಹರಿದಾಸ ಸಾಹಿತ್ಯವು ಮುಖ್ಯವಾಗಿ ಭಕ್ತಿ ಸಾಹಿತ್ಯವಾಗಿದೆ. ಇವರು ಹಾಡನ್ನು ಮಾಧ್ಯಮವಾಗಿ ಮಾಡಿಕೊಂಡು ಸಾಹಿತ್ಯ ಮತ್ತು ಸಂಗೀತವನ್ನು ಒಂದು ಕಟ್ಟಿನಲಿ ಜೋಡಿಸಿದ್ದಾರೆ. ಹರಿದಾಸರು ಸರ್ವಕಾಲೀಕ ವಿಚಾರಗಳ ದರ್ಶನ ಮಾಡಿಸುವುದರ ಮೂಲಕ ಭಾವದ ಜೊತೆ ಕುಣಿತ ಬರುವಂತೆ ಸಾಹಿತ್ಯ ರಚಿಸಿದರು. ಅವರದು ಜನಪ್ರಿಯ ಸಾಹಿತ್ಯ ಮಾತ್ರವಲ್ಲ; ಜನಾಭಿಪ್ರಾಯವನ್ನು ರೂಪಿಸುವ ಸಾಹಿತ್ಯವೂ ಹೌದು. ದಾಸರ ಕೀರ್ತನ ಸಾಹಿತ್ಯದಲ್ಲಿ ಹಲವು ಆಯಾಮಗಳನ್ನೊಳಗೊಂಡ ವಿಚಾರ ಸರಣಿಗಳಿವೆ. ಕಲಾತ್ಮಕತೆಯ ಜೊತೆಗೆ ವ್ಯಕ್ತಿತ್ವ ವಿಕಸನದ ಹಲವು ಸಿದ್ಧಾಂತಗಳ ವಿಶ್ಲೇಷಣೆಯನ್ನು ಕಾಣಬಹುದಾಗಿದೆ. ಮನುಷ್ಯನಿಗೆ ಬಹುಮುಖ ವ್ಯಕ್ತಿತ್ವಗಳಿವೆ. ಕೌಟುಂಬಿಕ ವ್ಯಕ್ತಿತ್ವ, ಸಾಮಾಜಿಕ ವ್ಯಕ್ತಿತ್ವ, ರಾಜಕೀಯ ವ್ಯಕ್ತಿತ್ವ, ಧಾರ್ಮಿಕ ವ್ಯಕ್ತಿತ್ವ, ಸಾಂಸ್ಕೃತಿಕ ವ್ಯಕ್ತಿತ್ವ, ಭಾಷಿಕ ವ್ಯಕ್ತಿತ್ವ, ರಾಷ್ಟ್ರೀಯ ವ್ಯಕ್ತಿತ್ವ, ಕುಲ, ಜಾತಿ, ಲಿಂಗ, ಅಂತಸ್ತು ಹೀಗೆ ಹಲವು ವ್ಯಕ್ತಿತ್ವಗಳ ಸರಮಾಲೆಯನ್ನು ಹೊತ್ತು ಮನುಷ್ಯ ಬದುಕುತ್ತಿದ್ದಾನೆ. ಅವು ವಿಭಿನ್ನ ಮನೊಧೋರಣೆಗಳನ್ನು ಮತ್ತು ಚಿಂತನೆಗಳನ್ನು ವ್ಯಕ್ತಪಡಿಸುತ್ತವೆ.

ಪುರಂದರದಾರು ಮತ್ತು ಕನಕದಾಸರು ತಮ್ಮ ಸಮಕಾಲೀನ ಬದುಕಿನ ನೈಜ ಚಿತ್ರಣವನ್ನು ಸಮರ್ಪಕವಾಗಿ ಮುಂದಿನ ಜನಾಂಗಕ್ಕೆ ತಲುಪಿಸುವಲ್ಲಿ ಸಫಲರಾಗಿದ್ದಾರೆ. ತಮ್ಮ ಕೀರ್ತನೆ ಮತ್ತು ಪದಗಳ ಮೂಲಕ ನಾಡಿನ ಜನರ ನಾಲಿಗೆ ಮೇಲೆ ಇಂದಿಗೂ ನಲಿದಾಡುತ್ತಿರುವ ಇವರು ಸಮಾಜದ ವ್ಯವಸ್ಥೆಯಲ್ಲಿ ಅನುಭವಿಸಿದ ಜೀವನಾನುಭವಗಳನ್ನೇ ಹಾಡಾಗಿ ಹರಿಸಿದ್ದಾರೆ. ತಮ್ಮ ಕೀರ್ತನೆಗಳ ಮೂಲಕ ಮತ, ಪಂಥ, ಕುಲ, ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ಸಮಾಜದ ಜನತೆಯಲ್ಲಿ ಆಧ್ಯಾತ್ಮಿಕ, ಸಾಮಾಜಿಕ ಹಾಗೂ ವೈಚಾರಿಕ ಪ್ರಜ್ಞೆಯನ್ನು ಬೆಳೆಸಲು ಶ್ರಮಿಸಿದ್ದಾರೆ. ಸೇವಾ ಕ್ಷೇತ್ರಗಳು ಉದ್ಯಮಗಳಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಮಾನವಿಕ ಶಿಕ್ಷಣ ಸಂಪೂರ್ಣ ಆತಂಕದಲ್ಲಿದೆ. ಸೇವಾ ಕ್ಷೇತ್ರಗಳು ಭ್ರಷ್ಟವಾಗುತ್ತಿವೆ. ಸಾಹಿತ್ಯ ಮಾತ್ರ ಸಮಾಜವನ್ನು ಮುನ್ನಡೆಸುವ ಸ್ವಶಕ್ತಿಯನ್ನು ಪಡೆದುಕೊಂಡಿದೆ. ಸಾಹಿತ್ಯ ಹೊಸ ತಲೆಮಾರಿನೊಂದಿಗೆ ಸಂವಹನ ನಡೆಸುವ ಬಗೆ ಬಹುಮುಖ್ಯವಾದುದು. ಇಂದು ಒಟ್ಟಾಗಿ ನಡೆಸುವ ಸಮೂಹ ಚಿಂತನೆ ಅತ್ಯಗತ್ಯವಾಗಿದೆ. ಹರಿದಾಸರು ಕನ್ನಡ ನಾಡಿನ ಮಹಾನ್ ಚೇತನಗಳು ಮಾತ್ರವಲ್ಲ; ಮಾನವನ ವ್ಯಕ್ತಿತ್ವ ನಿರ್ಮಾಣದ ಮೂಲಸೆಲೆಗಳು. ಇವರ ಅನುಭಾವಿಕ ಪ್ರಪಂಚ ಬಹಳ ವಿಸ್ತಾರವಾದುದು. ಇವರ ವಿಚಾರಗಳ ಬೆಳಕಿನಲ್ಲಿ ವ್ಯಕ್ತಿತ್ವ ನಿರ್ಮಾಣದ ಮೂಲನೆಲೆಗಳ ಅಂತರಗಂಗೆಯನ್ನು ಕಾಣುತ್ತೇವೆ. ಅತ್ಯಂತ ಆಪ್ತ ಮಾತುಗಳೆಲ್ಲ ಸರಕಾಗುತ್ತಿರುವ ಸಂದರ್ಭದಲ್ಲಿ ಮಾನವೀಯ ಸಂವೇದನಾಶೀಲತೆ ಕಡಿಮೆಯಾಗತ್ತಿದೆ. ನಮ್ಮ ಭಾವ ಜಗತ್ತು ನಾಶವಾಗುತ್ತಿದೆಯೆನೋ! ನಾವೆಲ್ಲ ದ್ವೀಪಗಳಾಗುತ್ತಿದ್ದೇವಾ? ಎಂಬ ಅನುಮಾನ ಕಾಡುತ್ತಿದೆ.

ಸಾಮಾಜಿಕ ಚಿಂತನೆ ಮತ್ತು ಸಮಾಜದ ವಿಮರ್ಶೆಯಲ್ಲಿ ಹರಿದಾಸರು ಸದಾ ಚಿಂತನಶೀಲರಾಗಿದ್ದರು ಎಂಬುದು ಅಕ್ಷರಶಃ ನಿಜ.

ಪುರಂದರದಾಸರ ಮತ್ತು ಕನಕದಾಸರ ಚಿಂತನೆಗಳು ಸತ್ಯ, ನೀತಿ, ಭಕ್ತಿ, ವೈರಾಗ್ಯ, ಸೈರಣೆ ಮತ್ತು ತಾಳ್ಮೆಯ ಕುರಿತು ತಿಳಿಸಿಕೊಡುತ್ತವೆ. ಇವರಿರ್ವರೂ ದಾರ್ಶನಿಕರು ಮೂಢನಂಬಿಕೆ, ಅಂಧಕಾರ, ಢಂಭಾಚಾರ, ಕಂದಾಚಾರ, ಸಂಕುಚಿತ ಮನೋಧೋರಣೆಗಳನ್ನು ಖಂಡಿಸಿದ್ದಾರೆ. ನದಿಯ ಹರಿವಿನಂತೆ ಇವರ ವಿಚಾರಗಳು ಸದಾ ಚಲನಶೀಲತೆಯನ್ನು ಹೊಂದಿವೆ. ಪರಂದರದಾಸರು ಒಂದು ಕೀರ್ತನೆಯಲ್ಲಿ 'ಅಲ್ಲಿರುವುದು ನಮ್ಮನೆ ಇಲ್ಲಿರುವುದು ಸುಮ್ಮನೆ' ಎಂದು ಹೇಳಿ, ಜೀವನದ ಜಂಜಡಗಳಿಂದ ಪಾರಾಗುವ ಬಗೆಯನ್ನು ಕರುಣಿಸು ಎಂದು ಪುರಂದರವಿಠಲನಲ್ಲಿ ಕೇಳುತ್ತಾರೆ. ಅದೇ ರೀತಿ ಸಾಮಾಜಿಕ ಚಿಂತನೆ ಮತ್ತು ಸಮಾಜದ ವಿಮರ್ಶೆಯಲ್ಲಿ ಕನಕದಾಸರದು ಜಾಗೃತಗೊಂಡ ಪ್ರಜ್ಞೆ, 'ಕುಲ ಕುಲ ಕುಲವೆನ್ನುತಿಹರು! ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ?' ಎಂದು ಪ್ರಶ್ನಿಸುತ್ತಾರೆ. ಜಾತಿ, ಮತ, ಧರ್ಮ, ಕುಲಗಳಾಚೆ ಮನುಷ್ಯ ಮನುಷ್ಯರು ಪರಸ್ಪರ ಗೌರವ ಭಾವನೆ ಹೊಂದಿರಬೇಕೆಂದು, ಮನುಕುಲವೇ ಶ್ರೇಷ್ಠವೆಂದು ಹೇಳುತ್ತಾರೆ. ಮುಂದುವರೆದು 'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳ ಲೇಸು' ಎನ್ನುತ್ತಾರೆ.

ಪುರಂದರದಾಸರು ಮತ್ತು ಕನಕದಾಸರು ಒಬ್ಬ ವ್ಯಕ್ತಿ ಉತ್ತಮ ಸಂಸ್ಕಾರವನ್ನು ಪಡೆದಾಗ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವೆಂದು ಹೇಳಿದ್ದಾರೆ. ಈ ಅಂಶಗಳನ್ನು ಅವರ ಕೀರ್ತನೆ, ಉಗಾಭೋಗ, ಸುಳಾದಿಗಳಲ್ಲಿ ಕಾಣಬಹುದಾಗಿದೆ. "ಆಚಾರವಿಲ್ಲದ ನಾಲಿಗೆ ನಿನ್ನ, ನೀಚ ಬುದ್ಧಿಯ ಬಿಡು ನಾಲಿಗೆ" ಎಂಬ ಕೀರ್ತನೆಯಲ್ಲಿ ಪುರಂದರದಾಸರು ಮನುಷ್ಯನ ಚಪಲತೆಗೆ ಕಾರಣವಾಗಿರುವ ನಾಲಿಗೆಗೆ ಎಚ್ಚರಿಕೆಯನ್ನು ನೀಡುತ್ತಾರೆ. ಇನ್ನೊಬ್ಬರ ಬಗ್ಗೆ ಕೊಂಕು ನುಡಿಯುವುದು, ಚಾಡಿ ಹೇಳುವುದು, ಕೆಟ್ಟ ಮಾತುಗಳನ್ನು ಆಡುವುದಕ್ಕೆ ಮೂಲ ಕಾರಣವಾದ ನಾಲಿಗೆಗೆ ನೀಚ ಬುದ್ಧಿಯನ್ನು ಬಿಡು ಎನ್ನುತ್ತಾರೆ. ಆ ಮೂಲಕ ಮಾನವ ಘನತೆಯನ್ನು, ವ್ಯಕ್ತಿತ್ವವನ್ನು ಸರಿಯಾಗಿ ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡುತ್ತಾರೆ.

"ನಗೆಯು ಬರುತಿದೆ ಎನಗೆ,  
ನಗೆಯು ಬರುತಿದೆ,  
ಜಗದೊಳಿರುವ ಜಾಣರೆಲ್ಲ,  
ಹಗರಣವ ಮಾಡುವುದನೆ ಕಂಡು"।

ಎಂದು ಜಾಣರ ಹಗರಣಗಳನ್ನು ಬಯಲಿಗೆಳೆಯುತ್ತಾರೆ. ಪುರಂದರದಾಸರ ಹಾಡುಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ರಚನೆಗಳು ಸರಳವಾಗಿವೆ. ನೇರವಾಗಿವೆ. ಆಡಂಬರ, ಬೂಟಾಟಿಕೆಯ ಜೀವನವನ್ನು ಗೆಲಿಮಾಡುತ್ತವೆ. ಆ ಮೂಲಕ ಅವರು ಸಾಮಾಜಿಕ ಒಳಿತಿಗಾಗಿ ಶ್ರಮಿಸಿದರು. ಅದೇ ತರಹ ಕನಕದಾಸರು ಕೂಡ ತಮ್ಮ ಕೀರ್ತನೆಯೊಂದರಲ್ಲಿ ಹಗರಣಗಳ ವಿವಿಧ ಮುಖಗಳನ್ನು ಅನಾವರಣಗೊಳಿಸುತ್ತಾರೆ.

"ಕಷ್ಟಪಟ್ಟರೂ ಇಲ್ಲ, ಕಳವಳೀಸಿದರಿಲ್ಲ,  
ಭ್ರಷ್ಟ ಮಾನವನಾ ಹಣೆಬರಹವಿದೆಲ್ಲಾ॥  
ಸಿರಿವಂತನ ಸ್ನೇಹ ಮಾಡಿ ನಡೆದರಿಲ್ಲ,  
ಪರಿಪರಿಯಲಿ ವಿದ್ಯೆ ಕಲಿತರಿಲ್ಲ,  
ನರಿಯ ಬುದ್ಧಿಯಲಿ ನಡೆದುಕೊಂಡರಿಲ್ಲ,  
ಅರಿಯದೆ ಹಲವ ಹಂಬಲಿಸಿದರಿಲ್ಲ"॥

ಎಂದು ದೈನಂದಿನ ಜೀವನದಲ್ಲಿ ನಡೆಯುವ ಹಲವು ಸ್ವಾರ್ಥ ಘಟನೆಗಳ ಬಗ್ಗೆ ತಿಳಿಹೇಳಿ, ಮನುಷ್ಯ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಹಲವು ಮಾರ್ಗಗಳನ್ನು ತಾತ್ವಿಕವಾಗಿ ಸೂಚಿಸುತ್ತಾರೆ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಲೋಕದ ಸರ್ವಜನರೂ ಮಾಡುವ ಕಾರ್ಯ ಹೊಟ್ಟೆ ಮತ್ತು ಬಟ್ಟೆಗಾಗಿಯೇ. ಅದನ್ನೂ ಮೀರಿ ಉಳಿಸಿಗಳಿಸಬೇಕೆಂಬ ದುರಾಸೆ ಮನುಷ್ಯನ ವ್ಯಕ್ತಿತ್ವವನ್ನು ಕುಬ್ಜಗೊಳಿಸುತ್ತದೆ. ಮನುಷ್ಯ ಜೀವನವೆಂದ ಮೇಲೆ ಹಲವು ಸಮಸ್ಯೆಗಳು, ಸವಾಲುಗಳು, ಕಷ್ಟಗಳು, ನೋವು, ಅವಮಾನ, ಸೋಲುಗಳು ಬಂದೇ ಬರುತ್ತವೆ. ಆದರೆ ಅವಕ್ಕೆಲ್ಲ ಕಾಲವೇ ಉತ್ತರಿಸುತ್ತದೆ. ಆಗ ಮನುಷ್ಯ ತಾಳ್ಮೆಯಿಂದ ಇರುವುದೇ ಕ್ಷೇಮ. ಆದ್ದರಿಂದಲೇ ಪುರಂದರದಾಸರು 'ತಾಳುವಿಕೆಗಿಂತ ಅನ್ಯ ತಪವು ಇಲ್ಲ' ಎನ್ನುತ್ತಾರೆ. ಕನಕದಾಸರು 'ತಾನಾರು ದೇಹವಾರು? ದಿವ್ಯ-ಜ್ಞಾನದಲಿ ತಿಳಿದಾತ ಪರಮಯೋಗಿ' ಎಂದು ಯೋಗಿಕದ ಅರ್ಥಛಾಯೆಯನ್ನು ತಿಳಿಸಿ, ಜೀವನವನ್ನು ಅರ್ಥಪೂರ್ಣವಾಗಿ ಮಾಡಿಕೊಳ್ಳಬೇಕೆಂದು ತಿಳಿಸುತ್ತಾರೆ. ಹೇಡಿಗಳ ಸ್ನೇಹ ಮಾಡಬಾರದು. ದುರ್ಜನರ ಸಂಗದಿಂದ ದೂರವಿರಬೇಕು. ಗರ್ವ-ಅಹಂಕಾರವನ್ನು ತ್ಯಜಿಸಬೇಕು.

'ಕಳ್ಳತನವನು ಮಾಡಿ ಒಡಲು ಹೊರೆಯಲು ಬೇಡ,  
ತಳ್ಳಿಗಾರನು ಆಗಿ ತಿರುಗಬೇಡ,  
ಕುಳ್ಳಿರ್ದ ಸಭೆಯೊಳಗೆ ಕುತ್ಸಿತವು ಬೇಡ  
ಉಳ್ಳವನು ನಾನೆಂದು ಉಬ್ಬಬೇಡ।  
ದೊರೆತನವು ಬಂದಾಗ ಕೆಟ್ಟು ನುಡಿಯಲು ಬೇಡ,  
ಸಿರಿಬಂದಕಾಲಕ್ಕೆ ಉರಿಯಬೇಡ,  
ಸಿರಿವಂತ ಶ್ರೀಕಾಗಿನೆಲೆಆದಿ ಕೇಶವನ,  
ಚರಣ ಕಮಲವ ಸೇರಿ ಸುಖಿಯಾಗೋ ಮನುಜಾ।

ಎಂದು 'ಏನು ಇಲ್ಲದ ಎರಡು ದಿನದ ಸಂಸಾರ' ಕೀರ್ತನೆಯಲ್ಲಿ ಕನಕದಾಸರು ನಿಜದರಿವಿನ ಬೆಳಕನ್ನು ಮೂಡಿಸಿದ್ದಾರೆ. ಪ್ರಾಮಾಣಿಕವಾಗಿ ದುಡಿದುಣ್ಣಲು ಸಾಕಷ್ಟು ಅವಕಾಶಗಳಿರುವಾಗ ಕಳ್ಳತನ ಮಾಡಿ ಒಡಲು ಹೊರೆಯುವ ಅನಿವಾರ್ಯತೆಯಾದರೂ ಏಕೆ? ನಮ್ಮಲ್ಲಿ ಸಂಪತ್ತು ಇದ್ದಾಗ ಗರ್ವಪಡಬಾರದು. ದೊರೆತನ ದೊರಕಿದಾಗ ಕಠೋರನಾಗಬಾರದು. ಮಾನವ ಸುಖಿಯಾಗಲು ಹಂಚಿಕೊಂಡು ತಿನ್ನುವ ಬುದ್ಧಿಯನ್ನು ಬೆಳೆಸಿಕೊಳ್ಳಬೇಕು ಎನ್ನುತ್ತಾರೆ.

ಹೆತ್ತ ತಂದೆ ತಾಯಿಗಳ ಮನವ ನೋಯಿಸಿ ನಿತ್ಯವೂ ದಾನಧರ್ಮವನ್ನು ಮಾಡಿದರೆ ಏನು ತಾನೇ ಪ್ರಯೋಜನ? ಎಂದು ಕೇಳುತ್ತಾರೆ ಪುರಂದರದಾಸರು. ಬದುಕಿನಲ್ಲಿ ಸತ್ಯ, ಸದಾಚಾರ, ಆತ್ಮಸಂಯಮ, ಸಮಚಿತ್ತತೆ, ಶಾಂತ ಮನೋಭಾವಗಳನ್ನು ಬೆಳೆಸಿಕೊಳ್ಳಬೇಕು. ಸಂಪತ್ತು ಎಂಬುದು ಮಳೆಬಿಲ್ಲಿನಂತೆ; ನೀರಿನ ಮೇಲಿನ ಗುಳ್ಳೆಯಂತೆ. ಆದ್ದರಿಂದ ಅತಿಯಾದ ಸಂಪತ್ತಿನ ವ್ಯಾಮೋಹಿಯಾಗಿರಬಾರದು. ಸಕಲ ವಿದ್ಯೆಗಳನ್ನು ಪಡೆದು ಅದನ್ನು ಇತರರಿಗೆ ಹಂಚುತ್ತ ಹೋದಂತೆ ಅದು ಇನ್ನೂ ಬೆಳೆಯುತ್ತ ಹೋಗುತ್ತದೆ. ಅದು ನಿಜವಾದ ಸಂಪತ್ತು. ಹರಿಕೊಟ್ಟಕಾಲಕ್ಕೆ ಹಂಚಿಕೊಂಡು ಬದುಕಬೇಕು. ಇಲ್ಲದಿರೆ ಅದು ಯಾರಿಗೂ ಉಪಯೋಗಕ್ಕೆ ಬಾರದಂತಾಗುತ್ತದೆ. ಜೀವನದಲ್ಲಿ ಸಮಸ್ಯೆಗಳು ಬಂದಾಗ ತಾಳ್ಮೆಯಿಂದ ಅವುಗಳನ್ನು ಎದುರಿಸಬೇಕು. ಈ ಸಂಸಾರ ಸಾಗರವನ್ನು 'ಈಸಬೇಕು ಇದ್ದು ಜಯಿಸಬೇಕು' ಆಗಲೇ ನಮ್ಮ ವ್ಯಕ್ತಿತ್ವ ಘಟ್ಟಿಗೊಳ್ಳುತ್ತದೆ. 'ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗೆ ಸುಭಿಕ್ಷಕಾಲ'ವಾಗಿದೆ. ಉಪಕಾರ ಮಾಡಿದವರಿಗೆ ಅಪಕಾರ ಬಗೆಯುವ ಕಾಲವಿದಾಗಿದೆ. ಧರ್ಮಜರಿಗಿಂತ ಕರ್ಮಜರೆ

ಜಯಿಸುವ ಕಾಲವಾಗಿದೆ. ಹಲವು ದುಷ್ಟ ವಕ್ರದೃಷ್ಟಿಗಳು ಸದಾ ಬೆನ್ನುಬಿದ್ದಿರುತ್ತವೆ. ಮೋಸಗಾರರಿಂದ ಮೋಸ ಹೋಗದೇ ಸದಾ ಎಚ್ಚರಿಕೆಯಿಂದ ಇರಬೇಕು. ಕೆಟ್ಟ ವ್ಯಕ್ತಿಗಳ ಸಹವಾಸದಿಂದ ಉತ್ತಮ ವ್ಯಕ್ತಿತ್ವ ಹೊಂದಿದವರಿಗೂ ಕಳಂಕ ಬರುತ್ತದೆ. ಆದ್ದರಿಂದ ಅಂಥ ದುಷ್ಟರಿಂದ ದೂರವಿರುವುದೇ ಲೇಸು. 'ಬೇವು ಬೆಲ್ಲದೊಳಿಡಲೇನು ಫಲ, ಹಾವಿಗೆ ಹಾಲೆರೆದರೇನು ಫಲ' ಎಂದು ಪ್ರಶ್ನಿಸುತ್ತಾರೆ ಪುರಂದರದಾದರು. ಎಲ್ಲಕಡೆಗೂ ಕುಟಿಲ ನುಡಿಗಳು, ಸುಳ್ಳು ನಟನೆಗಳು, ಕಪಟ, ವಂಚನೆಗಳು, ನಯನಾಜೂಕಿನ ಹೀನ ಮಾತುಗಳು ತುಂಬಿವೆ. ಅಂತರಂಗದಲ್ಲಿ ವಿಷ ತುಂಬಿಕೊಂಡು, ಬಹಿರಂಗದಲ್ಲಿ ಶುದ್ಧತೆಯನ್ನು ತೋರ್ಪಡಿಸುವ ಜನ ಏನನ್ನೂ ತಾನೇ ಮಾಡದೇ ಇರುವರು? ಪುರಂದರದಾಸರು 'ಪದುಮನಾಭನ ಪಾದ ಭಜನೆಯೇ ನಿಜವಾದ ಭಾಗ್ಯ, ನಿಜವಾದ ಸುಖ' ಎಂದಿದ್ದಾರೆ. ಮತ್ತೊಂದು ಕೀರ್ತನೆಯಲ್ಲಿ 'ಕಲಿಯುಗದೋಳು ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವವು' ಎಂದು ನುಡಿದಿದ್ದಾರೆ.

ಕನಕದಾಸರು ಭಾಮಿನಿ ಷಟ್ಪದಿಯಲ್ಲಿ ಬರೆದ 'ಹರಿಭಕ್ತಿಸಾರ'ದಲ್ಲಿ ಸುರಪುರನಿಲಯ ಚೆನ್ನಿಗರಾಯನನ್ನು ಸ್ತುತಿಸುತ್ತಾ ಭಕ್ತಿಪರವಶರಾಗುತ್ತಾರೆ.

> 'ದೀನ ನಾನು ಸಮಸ್ತ ಲೋಕಕೆ,
> ದಾನಿ ನೀನು ವಿಚಾರಿಸಲು ಮತಿ,
> ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು ॥
> ಏನ ಬಲ್ಲೆನು ನಾನು ನೆಜೆ ಸು
> ಜ್ಞಾನಮೂರುತಿ ನೀನು ನಿನ್ನ ಸ
> ಮಾನರುಂಟೇ ದೇವ ರಕ್ಷಿಸು ನಮ್ಮನನವರತ॥
> (ಕರ್ಣಾಟಕ ಕವಿಚರಿತೆ. ಪುಟ. ೧೯೨)

ಇಲ್ಲಿ ದೇವನಿಗೆ ಆರೋಪಿತವಾಗಿರುವ ದಾನಿ, ಮಹಾಮಹಿಮ ಕೈವಲ್ಯಪತಿ, ಸುಜ್ಞಾನಮೂರುತಿ ಕಲ್ಪನೆಯೇ ಅವರ ವ್ಯಕ್ತಿತ್ವದ ಸಿದ್ಧಿಯನ್ನು ಪರೋಕ್ಷವಾಗಿ ತಿಳಿಸುವುದರ ಜೋತೆಗೆ ನಮ್ಮನ್ನು ನಿರಂತರ ರಕ್ಷಿಸಿ, ಆ ಮೇಲ್ಮೆಯ ಮಟ್ಟಕ್ಕೆ ಕರೆದುಕೋ ಎಂಬ ಧೋರಣೆ ಇರುವುದು ತಿಳಿಯುತ್ತದೆ.

ಅದೇ ತರ ಕನಕದಾಸರು 'ಸತ್ಯವಂತರ ಸಂಗವಿರಲು' ಎಂಬ ಕೀರ್ತನೆಯಲ್ಲಿ 'ಸತ್ಯವಂತರ ಸಂಗವಿರಲು ತೀರ್ಥವೇತಕೆ, ನಿತ್ಯಜ್ಞಾನಿಯಾದ ಮೇಲೆ ಚಿಂತೆ ಯಾತಕೆ' ಎನ್ನುತ್ತಾರೆ. ನಿಜದರಿವು ಹೊಂದಿದ ಒಡನಾಡಿಗಳ ಒಡನಾಟ ಇರುವಾಗ ತೀರ್ಥವೇಕೆ ಎಂದು ಕನಕದಾಸರು ಪ್ರಶ್ನಿಸುತ್ತಾರೆ. ಮುಂದುವರೆದು ಸಕಲಜ್ಞಾನ ಸಂಪತನ್ನು ಪಡೆದ ಮೇಲೆ ಮನುಷ್ಯನಿಗೆ ಯಾವ ಚಿಂತೆಗಳು ಕಾಡಲಾರವು ಎಂದು ಸಮಾದಾನ ಹೇಳುತ್ತಾರೆ. ಕನಕದಾಸರು 'ತಲ್ಲಣಿಸದಿರು ತಾಳು ಮನವೇ, ಎಲ್ಲರನೂ ಸಲಹುವನು ಇದಕೆ ಸಂಶಯವಿಲ್ಲ' ಎಂದು ಹೇಳಿದರೆ, ಪುರಂದರದಾಸರು ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬ್ಯಾಡಿ ಹುಚ್ಚಪ್ಪಗಳಿರ' ಎಂದು ಎಚ್ಚರಿಸಿ, ನಮ್ಮ ಅರಿವಿನ ನೆಲೆಯನ್ನು ವಿಸ್ತಾರಗೊಳಿಸುತ್ತಾರೆ.

ಕೊನೆಯ ನುಡಿ : ಐದು ನೂರು ವರ್ಷಗಳ ಇತಿಹಾಸ ಹೊಂದಿರುವ ಹರಿದಾಸ ಪರಂಪರೆಯಲಿ ಪುರಂದರದಾಸರು ಮತ್ತು ಕನಕದಾಸರು ಕನ್ನಡ ಭಾಷೆಗೆ ಹೊಸ ಕಾಂತಿಯನು ನೀಡಿದರು. ಇವರು ಭಕ್ತಿಯ ಜೊತೆಗೆ ವೈಚಾರಿಕ ಮತ್ತು ಪ್ರತಿಭಟನಾತ್ಮಕ ನೆಲೆಗಟ್ಟಿನಿಂದ ದಾಸ ಸಾಹಿತ್ಯವನ್ನು ರೂಪಿಸಿ, ಇಂದಿಗೂ ಪ್ರಸ್ತುತವೆನಿಸುವಂತೆ ಮಾಡಿದ್ದಾರೆ. 'ನೀ ಮಾಯೆಯೊಳಗೊ ನಿನ್ನೊಳು ಮಾಯಯೋ' ಎಂಬ ಹೊಸ ಚಿಂತನಮಾರ್ಗವನ್ನು ಶೋಧಿಸಿದ್ದಾರೆ. ಇವರ ಚಿಂತನೆಗಳನ್ನು ಮನನ ಮಾಡಿಕೊಳ್ಳುವ ಮೂಲಕ ಉತ್ತಮ ವ್ಯಕ್ತಿತ್ವವನ್ನು ರೂಪಸಿಕೊಳ್ಳಬಹುದಾಗಿದೆ.

**ಆಕರ ಗ್ರಂಥಗಳು.**


1. ಕನ್ನಡ ಸಾಹಿತ್ಯ ಚರಿತ್ರೆ – ಡಾ. ರಂ. ಶ್ರೀ. ಮುಗಳಿ
2. ಕೀರ್ತನಕಾರರು – ಡಾ. ಎಚ್. ಎಸ್. ವೆಂಕಟೇಶಮೂರ್ತಿ
3. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ – ಡಾ. ಬಸವರಾಜ ಕಲ್ಗುಡಿ
4. ಹರಿದಾಸರ ಆಂದೋಲನ : ಒಂದು ಅಧ್ಯಯನ – ಎನ್. ಕೆ. ರಾಮಶೇಷನ್
5. ಕರ್ಣಾಟಕ ಕವಿಚರಿತೆ (ದ್ವಿತೀಯ ಸಂಪುಟ) – ಆರ್. ನರಸಿಂಹಾಚಾರ್ಯ
6. ಕನಕ ಸಾಹಿತ್ಯ ದರ್ಶನ – (ಸಂ) ದೇ. ಜವರೇಗೌಡಪ್ಪ